# ದಲಿತ ಲೋಕಕ್ಕೆ ಇಮೈಯಂ ಕನ್ನಡಿ



ಕೆ. ನಲ್ಲತಂಬಿ

'ಕೋವೇರು ಕಳುದೈಗಳ್' (ಹೇಸರಗತ್ತೆಗಳು) ತಮಿಳಿನ ಕಾದಂಬರಿಲೋಕದಲ್ಲಿ ಒಂದು ಪ್ರಮುಖ ಹರಿವು. ಈ ಕಾದಂಬರಿಯ ಲೇಖಕ ಇಮೈಯಂ, ತಮಿಳಿನ ದಲಿತ ಸಾಹಿತ್ಯವನ್ನು ಪುಷ್ಟಿಗೊಳಿಸಿರುವ ಅನನ್ಯ ಲೇಖಕ. ಅವರಿಗೀಗ 'ಕುವೆಂಪು ರಾಷ್ಟ್ರಪ್ರಶಸ್ತಿ' ಸಮ್ಮಾನ.

ಇಮೈಯಂ ಸಮಕಾಲೀನ ತಮಿಳು ಸಾಹಿತ್ಯದ ಮಹತ್ವದ ಬರಹಗಾರರಲ್ಲೊಬ್ಬರು. ತಮಿಳಿನ ಇಮೈಯಂ ಎನ್ನುವ ಶಬ್ದ 'ಹಿಮ ಮಯ' ಎನ್ನುವುದನ್ನೂ, ಹಿಮಾಲಯವನ್ನೂ ಸೂಚಿಸುವಂತಹದ್ದು. ತಾನೊಂದು ದಿನ ಹಿಮಾಲಯದ ಎತ್ತರಕ್ಕೆ ಬೆಳೆದು ನಿಲ್ಲುತ್ತೇನೆ ಎನ್ನುವ ಮಹತ್ವಾಕಾಂಕ್ಷೆಯಿಂದಲೇ ಅಣ್ಣಾಮಲೈ ಅವರು 'ಇಮೈಯಂ' ಎನ್ನುವ ಕಾವ್ಯನಾಮ ಆಯ್ದುಕೊಂಡಿರಬಹುದು.

ಇಮೈಯಂ ಕಾವ್ಯನಾಮದ, ವೆ. ಅಣ್ಣಾಮಲೈ (ಜನನ: 1964) ತಮಿಳುನಾಡಿನ ಕಡಲೂರ್ ಜಿಲ್ಲೆಯ ಕಳುದೂರ್ ಎಂಬ ಗ್ರಾಮದವರು; ರೈತ ಕುಟುಂಬಕ್ಕೆ ಸೇರಿದ ವೆಂಕಟ್ಟನ್–ಚಿನ್ನಮ್ಮಾಳ್ ದಂಪತಿಯ ಪುತ್ರ. ಶಾಲಾದಿನಗಳಲ್ಲಿ ಅವರೇನೂ ಜಾಣ ವಿದ್ಯಾರ್ಥಿ ಅನ್ನಿಸಿಕೊಂಡಿರಲಿಲ್ಲ. 'ಪ್ರಾಥಮಿಕ ಶಾಲೆಗೆ ಹೋದ ದಿನಗಳನ್ನು ಬೆರಳೆಣಿಕೆಯಲ್ಲಿ ಲೆಕ್ಕ ಹಾಕಿಬಿಡಬಹುದು. ಹುಣಿಸೆಮರದ ತೋಪುಗಳಲ್ಲೂ, ಹಿಪ್ಪೆಮರದ ತೋಪುಗಳಲ್ಲೂ ಅಲೆದಾಡುತ್ತಿದ್ದ ದಿನಗಳೇ ಹೆಚ್ಚು. ಕಾಡಿನೊಳಗೆ ಸುತ್ತಾಡುವುದೇ ಇಷ್ಟ, ಶಾಲೆಗೆ ಹೋಗಲು ಒಂದು ದಿನ ಸಹ ಇಷ್ಟಪಡಲಿಲ್ಲ' ಎಂದು ಹೇಳಿಕೊಂಡಿದ್ದಾರೆ. ಇಂಥ ಹುಡುಗ, ಒಂದು ದಿನ ಕಾಡಿನಲ್ಲಿ ಅಲೆಯುತ್ತಿರುವಾಗ ಆ ಊರಿನ ಮುಖಂಡರ ಕಣ್ಣಿಗೆ ಬಿದ್ದ. ಮಾಜಿ ಶಾಸಕರೂ, ಮಾಜಿ ಸಂಸದರೂ ಹಾಗೂ ಮಾಜಿ ಪಂಚಾಯಿತಿ ಸಮಿತಿ ಸದಸ್ಯರೂ ಆದ ಗಣೇಶನ್ ಹೆಸರಿನ ಅವರು, ಶಾಲೆಯಿಂದ ಹೊರಗೆ ಓಡಾಡುತ್ತಿದ್ದ ಬಾಲಕನನ್ನು ಬಲವಂತವಾಗಿ ಎಳೆದುಕೊಂಡು ಹೋಗಿ ಆರನೇ ತರಗತಿಗೆ ಸೇರಿಸಿದರು. ಅಲ್ಲಿಂದ ಮುಂದೆ, ಅಣ್ಣಾಮಲೈ ಅವರ ವಿದ್ಯಾರ್ಥಿ ಜೀವನ ಏರುಮುಖದಲ್ಲೇ ಸಾಗಿತು. ಎಂ.ಎ., ಎಂ.ಇಡಿ.ವರೆಗೆ ಕಲಿತ ಅವರು, ಶಾಲಾ ಮೇಷ್ಟ್ರು ಕೆಲಸಕ್ಕೆ ಸೇರಿಕೊಂಡರು. ಅವರ ಶ್ರೀಮತಿ ಸ. ಪುಷ್ಪವಳ್ಳಿ ಕೂಡ ಹೈಸ್ಕೂಲ್ ಟೀಚರ್. ಈ ಮೇಷ್ಟ್ರುದಂಪತಿಗೆ ಇಬ್ಬರು ಗಂಡು ಮಕ್ಕಳು – ಕದಿರವನ್ ಹಾಗೂ ತಮಿಳ್ ಸೆಲ್ವನ್.